ದಿನಾಂಕಃ **16.07.2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**.**

<u>ಪಾಟೀ ಸವಾಲುಃ  ಪ್ರತಿವಾದಿ ಸಂಖ್ಯೆ **1, 3, 4, 6** ಮತ್ತು **7** ರವರ ಪರ ಶ್ರೀ ಎಂ ಓ ಜೆ  ವಕೀಲರಿಂದಃ-</u>

ನನ್ನ ಅಜ್ಜನ ಹೆಸರು ಸಣ್ಣತಿಮ್ಮಣ್ಣ.   ಸಣ್ಣತಿಮ್ಮಣ್ಣನ ಹೆಂಡತಿ ಹೆಸರು ಗಂಗಮ್ಮ.  ನನ್ನ ಅಜ್ಜನವರು 1946-47 ನೇ ಸಾಲಿನಲ್ಲಿ ಮರಣ ಹೊಂದಿರುತ್ತಾರೆ.  ನನ್ನ ಅಜ್ಜಿಯು 2000 ಆಸುಪಾಸಿನಲ್ಲಿ ಮರಣ ಹೊಂದಿರುತ್ತಾರೆ.  ನನ್ನ ಅಜ್ಜನಿಗೆ 4 ಜನ ಗಂಡು ಮಕ್ಕಳು, ಒಬ್ಬಳು ಹೆಣ್ಣು ಮಗಳು.   1 ನೇ ಕರಿಯಪ್ಪ, 2 ನೇ ತಿಮ್ಮಪ್ಪ, 3 ನೇ ಗಂಗಾಧರಪ್ಪ, 4 ನೇ ನಾಗಪ್ಪ.  ಹೆಣ್ಣು ಮಗಳ ಹೆಸರು ಕಮಲಮ್ಮ. ನನ್ನ ಅಜ್ಜನ ಎಲ್ಲಾ ಮಕ್ಕಳು ಮರಣ ಹೊಂದಿರುತ್ತಾರೆ.  ನನ್ನ ತಂದೆಯ ಹಿರಿಯಣ್ಣನ ಹೆಸರು ಕರಿಯಪ್ಪ. ಅವರಿಗೆ ಎಷ್ಟು ಜನ ಮಕ್ಕಳು ಎಂದರೆ ಒಬ್ಬ ಮಗಳು ಇದ್ದಳು.  ಅವರು ಈಗ ಮರಣ ಹೊಂದಿರುತ್ತಾರೆ. ಅವರಿಗೆ ಮದುವೆ ಆಗಿದ್ದು ಮಕ್ಕಳು ಇದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ.  ತಿಮ್ಮಪ್ಪ ರವರಿಗೆ ಒಟ್ಟು 9 ಜನ ಮಕ್ಕಳು. ಅವರುಗಳೆಂದರೆ ಕ್ರಮವಾಗಿ  ರಂಗಪ್ಪ, ರಂಗಮ್ಮ, ರತ್ನಮ್ಮ, ಕುಮಾರಪ್ಪ, ಸರೋಜಮ್ಮ, ಮಮತಮ್ಮ, ಕಮಲಮ್ಮ, ಚಂದ್ರಪ್ಪ ಮತ್ತು ಪದ್ಮಮ್ಮ.   ಚಂದ್ರಪ್ಪ ಮತ್ತು ಪದ್ಮಮ್ಮ ರವರು ಮರಣ ಹೊಂದಿರುತ್ತಾರೆ.  ನನ್ನ ಅಜ್ಜನ 3 ನೇ ಗಂಗಾಧರಪ್ಪ ರವರಿಗೆ ಒಟ್ಟು 8 ಜನ ಮಕ್ಕಳು.  ಅವರುಗಳೆಂದರೆ ಪರಮೇಶ್ವರಪ್ಪ, ಸ್ವಾಮಿ, ದೇವರಾಜ್, ಚಂಗು, ಗುರು, ಮಂಜು, ಮಂಗಳ, ಮಾಲಮ್ಮ.   ನನ್ನ ತಂದೆ ನಾಗಪ್ಪ ರವರಿಗೆ 4 ಜನ ಮಕ್ಕಳು.  ಅವರುಗಳೆಂದರೆ ತಿಪ್ಪೇಶ್, ರಮೇಶ್ (ಮರಣ ಹೊಂದಿರುತ್ತಾರೆ) ರಮೇಶ್ ರವರ ಹೆಂಡತಿ ಹೆಸರು ಗಂಗಮ್ಮ ಅವರಿಗೆ ಇಬ್ಬರು ಅಪ್ರಾಪ್ತ ಮಕ್ಕಳು ಇರುತ್ತಾರೆ.  ಗೌರಮ್ಮ ಮತ್ತು ನಾನು.  10 ನೇ ಪ್ರತಿವಾದಿಯ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.  ನನ್ನ ಅಜ್ಜನ ಮಕ್ಕಳ ಎಲಾ ವಾರಸುದಾರರನ್ನು ಈ ದಾವೆಯಲ್ಲಿ  ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

ನನ್ನ ತಂದೆಯ ದೊಡ್ಡಪ್ಪ ಕರಿಯಪ್ಪ ರವರ ಮಕ್ಕಳನ್ನು ಈ ದಾವೆಯಲ್ಲಿ  ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.  ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ನನಗೆ ತೊಂದರೆ ಇಲ್ಲಾ ಎಂದರೆ ಸರಿ.  ನನ್ನ ಅಜ್ಜ ಸಣ್ಣತಿಮ್ಮಣ್ಣ ರವರಿಗೆ ಯಾವ ಯಾವ ಗ್ರಾಮದಲ್ಲಿ ಆಸ್ತಿಗಳು ಇತ್ತು ಎಂದರೆ ಸಾಕ್ಷಿ ಎಂ. ಕೋಡಿಹಳ್ಳಿ ಗ್ರಾಮದ ಸರ್ವೆ ನಂ 59ಃ4 ರಲ್ಲಿ 5 ಎಕರೆ 33 ಗುಂಟೆ ಜಮೀನು, ವಕ್ಕಲಗೆರೆ ಗ್ರಾಮದ ಸರ್ವೆ ನಂ 10ಃ112 ಬಿ ರಲ್ಲಿ 4 ಎಕರೆ 33 ಗುಂಟೆ ಜಮೀನು ಇತ್ತು.  ಕೋಡಿಹಳ್ಳಿ ಗ್ರಾಮದಲ್ಲಿ ನನ್ನ ಅಜ್ಜನ ಹೆಸರಿನಲ್ಲಿ ಒಟ್ಟು 5 ಎಕರೆ 33 ಗುಂಟೆ ಜಮೀನು ಇತ್ತು.  ಸರ್ವೆ ನಂ 64 ರಲ್ಲಿ 21 ಗುಂಟೆ ತೆಂಗಿನ ತೋಟ ಮತ್ತು ಎರಡು ಮನೆಗಳು ಕೋಡಿಹಳ್ಳಿ ಗ್ರಾಮದಲ್ಲಿ ಇರುತ್ತದೆ.  ಇದನ್ನು ಹೊರತುಪಡಿಸಿ ಕೋಡಿಹಳ್ಳಿ ಗ್ರಾಮದಲ್ಲಿ ಬೇರೆ ಆಸ್ತಿಗಳು ಇರುವುದಿಲ್ಲ.  ವಕ್ಕಲಗೆರೆ ಗ್ರಾಮದಲ್ಲಿ ಬಿ ಅನುಸೂಚಿ ಆಸ್ತಿ ಬಿಟ್ಟು ಬೇರೆ ಆಸ್ತಿ ಇರುವುದಿಲ್ಲ.  ದಾವಾ ಆಸ್ತಿಯಲ್ಲಿ ಈ ಮೇಲೆ ಹೇಳಿದ ಮನೆ ಮತ್ತು ತೋಟ ಸೇರಿಸಿಲ್ಲ ಎಂದರೆ ಸಾಕ್ಷಿ ದಾಖಲೆಗಳು ಸಿಗದೇ ಇದ್ದ ಕಾರಣ ಸೇರಿಸಿರುವುದಿಲ್ಲ ಎಂದು ನುಡಿಯುತ್ತಾರೆ.  ಸದರಿ

ಆಸ್ತಿಗಳ ದಾಖಲೆಯನ್ನು ನೀಡುವಂತೆ ಅರ್ಜಿ ಸಲ್ಲಿಸಿದ್ದು ಅವರು ಹುಡುಕುತ್ತಿರುತ್ತಾರೆ. ಕಂದಾಯ ಪಾವತಿಸುವಾಗ ದಾಖಲೆಗಳನ್ನು ನೀಡುತ್ತಾರೆ ಎಂದರೆ ಸರಿ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಲು ತೊಂದರೆ ಇಲ್ಲಾ ಎಂದರೆ ಸರಿ.

**( ಮುಂದುವರೆದ ಪಾಟೀ ಸವಾಲಿಗಾಗಿ ಸಮಯಕೋರಿದ್ದರಿಂದ ಮುಂದೂಡಲಾಯಿತು )**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-

**3** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.